ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
"ಆರೋಗ್ಯ ಸೌಧ", 6ನೇ ಮಹಡಿ, 1ನೇ ಅಡ್ಡ ರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 23
ದೂರವಾಣಿ ಸಂಖ್ಯೆ:080-23140943 ಇ-ಮೇಲ್ ವಿಳಾಸ: dirhfw@gmail.com

ಸಂಖ್ಯೆ: ಪೌಆಕಾ/ 06/2021-22 ದಿನಾಂಕ:20.04.2021

## ಸುತ್ತೋಲೆ

ವಿಷಯ: COVID-19 ಸಾಂಕ್ರಾಮಿಕ ರೋಗದಿಂದ ಸಾವಾದ ಪಕ್ಷದಲ್ಲಿ ಪಾಲಿಸಬೇಕಾದ ಮಾರ್ಗದರ್ಶನ ಕುರಿತು.

ಉಲ್ಲೇಖ:
1. DD/SSU/COVID-19 SOPS & Guidelines/42 Part (A)/2020-21, Date: 11.09.2020. Revised guidelines on dead body management in the context of COVID-19 pandemic (Version-3)
2. DHS/DD/SSU/17/2020-21, Date: 06.08.2020. Revised guidelines on dead body management in the context of COVID-19 pandemic (Version-3)
3. COMM/PSR/34/2020-21, Date: 17.07.2020.
4. Protocol to followed in case of Deaths of Suspected and confirmed Covid-19 positive cases
5. HFW 231 ACS 2020, Date:25.06.2020. Handling over of dead body in suspected COVID-19 deaths.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಈಗಾಗಲೇ COVID-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಹಾಗೂ ಸೂಕ್ತವಾಗಿ ನಿಭಾಯಿಸಲು ಸ್ಪಷ್ಟ ಹಾಗೂ ನಿರ್ದಿಷ್ಟ ಮಾರ್ಗದರ್ಶನ ಹಾಗೂ ಸೂಚನೆಗಳನ್ನು ನೀಡಲಾಗಿರುತ್ತದೆ. ಆದಾಗಿಯೂ ಈ ಕೆಳಕಂಡ ವಿಷಯಗಳು ಈ ನಿರ್ದೇಶನಾಲಯದ ಗಮನಕ್ಕೆ ಬಂದಿರುವುದು

1. ಹಲವಾರು ಆಸ್ಪತ್ರೆಗಳಲ್ಲಿ ತಮ್ಮ ತೀವ್ರ ನಿಗಾ ಘಟಕಗಳಲ್ಲಿ (ICU) ರೋಗಿಗಳು ಮೃತಪಟ್ಟಿದ್ದರೂ ಸಹ, ಮೃತ ದೇಹವನ್ನು ಹಾಸಿಗೆಗಳಲ್ಲಿಯೇ ಉಳಿಸಿಕೊಳ್ಳುತ್ತಿರುವ ಕಾರಣ ಅತ್ಯವಶ್ಯಕವಾಗಿ ಬೇಕಾಗಿರುವ ರೋಗಿಗಳಿಗೆ ತೀವ್ರ ನಿಗಾ ಘಟಕದ ಸೇವೆಯು ಸಿಗದೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರಿಂದ ದೂರು ಬಂದಿರುತ್ತದೆ.
2. COVID-19 ಸೋಂಕಿನಿಂದ ಸಾವು ಸಂಭವಿಸಿದ್ದರೂ ಸಹ ಹಲವಾರು ಆಸ್ಪತ್ರೆಗಳು ಸಾವು ಧೃಡೀಕರಣ ನೀಡುವುದು ತುಂಬ ವಿಳಂಬ ಮಾಡುತ್ತಿರುವುದು ಸಹ ಗಮನಕ್ಕೆ ಬಂದಿರುತ್ತದೆ.

ಆದುದರಿಂದ ಈ ಮೇಲ್ಕಂಡ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಈ ಕೆಳಕಂಡಂತೆ ಆದೇಶಿಸಲಾಗಿದೆ.

1. ತೀವ್ರ ನಿಗಾ ಘಟಕದಲ್ಲಿ ಸಾವು ಸಂಭವಿಸಿದ ಪಕ್ಷದಲ್ಲಿ ಅಲ್ಲೇ ಕಾರ್ಯನಿರ್ವಹಿಸುತ್ತಿರುವ ವೈದ್ಯರು ವಿಳಂಬ ಮಾಡದೆ ಸಾವು ಸಂಭವಿಸಿದ ಅರ್ಧ ಗಂಟೆಯೊಳಗೆ ಸಾವನ್ನು ಘೋಷಿಸಿ ಸಂಬಂಧಿತ Form 4 ಅಥವಾ ಸಂಬಂಧಿತ ದಾಖಲಾತಿಗಳನ್ನು ತಯಾರಿಸಿ ತಕ್ಷಣವೇ ಮೃತದೇಹವನ್ನು ಸಂಬಂಧಿಕರಿಗೆ ಎಲ್ಲಾ ಗೌರವಯುತ ಕ್ರಮಗಳನ್ನು ಪಾಲಿಸಿ ಹಸ್ತಾಂತರಿಸುವುದು.
2. ಆಯಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸ್ವಸರ್ಕಾರ (Local Self Government) ಸಂಸ್ಥೆಯವರು ಎಲ್ಲಾ ಗೌರವಯುತ ಕ್ರಮಗಳನ್ನು ಅನುಸರಿಸುತ್ತಾ ನೀಡಿರುವ COVID-19 ಮಾರ್ಗದರ್ಶನವನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸುತ್ತಾ ಅಂತ್ಯ ಸಂಸ್ಕಾರಕ್ಕೆ ಸಹಕರಿಸಿ ಕ್ರಮತೆಗೆದುಕೊಳ್ಳುವುದು.
3. ಶವಸಂಸ್ಕಾರಕ್ಕೆ ಚಿತಾಗಾರ ಅಥವಾ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲು ವಿಳಂಬವಾಗದಂತೆ ನೋಡಿಕೊಳ್ಳುವುದು ಆಯಾ ಸ್ಥಳೀಯ ಸ್ವಸರ್ಕಾರ (Local Self Government) ಸಂಸ್ಥೆಯವರು ಕ್ರಮಗಳನ್ನು ವಹಿಸುವುದು.

ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
3. ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
4. ಮಾನ್ಯ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
5. ಮಾನ್ಯ ಅಭಿಯಾನ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಸಮಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ವಿಭಾಗೀಯ ಜಂಟಿ ನಿರ್ದೇಶಕರು, ಬಿಬಿಎಂಪಿ, ಬೆಂಗಳೂರು ನಗರ ವಿಭಾಗ, ಬೆಳಗಾವಿ ವಿಭಾಗ, ಕಲ್ಬುರ್ಗಿ ವಿಭಾಗ, ಮೈಸೂರು ವಿಭಾಗ.
2. ವಿಭಾಗೀಯ ಆರೋಗ್ಯ ಅಧಿಕಾರಿಗಳು, ಬಿಬಿಎಂಪಿ, ಬೆಂಗಳೂರು
3. ಮುಖ್ಯ ವೈದ್ಯಾಧಿಕಾರಿಗಳು, ಬಿಬಿಎಂಪಿ, ಬೆಂಗಳೂರು.
4. ಮುಖ್ಯ ಆರೋಗ್ಯ ಅಧಿಕಾರಿಗಳು, ವೈದ್ಯಕೀಯ, ಬಿಬಿಎಂಪಿ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ಜಿಲ್ಲಾ ಶಸ್ತ್ರಚಿಕಿತ್ಸಕರು
6. ವೈದ್ಯಕೀಯ ಅಧೀಕ್ಷಕರು / ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು / ಆಡಳಿತಾತ್ಮಕ ಮುಖ್ಯಸ್ಥರು, ಖಾಸಗಿ ವೈದ್ಯಕೀಯ ಸಂಸ್ಥೆಗಳು